**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಕ್ರಿ ಮಿಸ್ 214/2019**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ದಿನಾಂಕಃ 14-02-2025** **ಪಿ ಡಬ್ಲ್ಯೂ 1**

**ಮುಂದುವರೆದ ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದಃ**

ನೀವು ನ್ಯಾಯಾಲಯಕ್ಕೆ ಸಲ್ಲಿಸಿದ ದಾಖಲಾತಿಗಳ ಬಗ್ಗೆ ನಿಮಗೆ ಸಂಪೂರ್ಣ ಮಾಹಿತಿ ಇದೆ ಎಂದರೆ ಸಾಕ್ಷಿಯು ಕೆಲವು ದಾಖಲೆಗಳ ಬಗ್ಗೆ ನೆನಪಿದೆ ಕೆಲವು ದಾಖಲೆಗಳ ಬಗ್ಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ನಿಪಿ.2 ರಲ್ಲಿ ನನ್ನ ಗಂಡನ ಹೆಸರು ನಮೂದು ಆಗಿಲ್ಲ ಎಂದರೆ ಸರಿ. ನಿಪಿ.6 ರಲ್ಲಿ ನನ್ನ ತಂದೆ ತಾಯಿ ಹೆಸರು ನಮೂದು ಆಗಿಲ್ಲ ಎಂದರೆ ಸರಿ. ನಿಪಿ.7 ರಲ್ಲಿ ದಿಃ 15.05.2004 ರಂದು ನೀಡಿದ ದಾಖಲೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಎದುರುದಾರರು ಮದುವೆಯಾದ ನಂತರ ಮತ್ತೊಂದು ಚೈನ್ ಸರ ಕೇಳಿದ್ದರು ಆ ಸಮಯದಲ್ಲಿ ಅದನ್ನು ಖರೀದಿ ಮಾಡಿ ನೀಡಿದ್ದೇವೆ ಎಂದು ನುಡಿಯುತ್ತಾರೆ. ನಿಪಿ.8 ಮತ್ತು 9 ರಲ್ಲಿ ಅದನ್ನು ಖರೀದಿ ಮಾಡಿದವರ ಹೆಸರು ನಮೂದು ಮೂಡಿಲ್ಲ ಎಂದರೆ ಸರಿ. ನಿಪಿ.10 , 10(ಎ) ಮತ್ತು ನಿಪಿ.11 ಮದುವೆಯಾದ ನಂತರದಲ್ಲಿ ಖರೀದಿ ಮಾಡಿದ ರಶೀದಿಗಳು ಎಂದರೆ ಸಾಕ್ಷಿಯು ಮದುವೆಗೆ ಮುಂಚೆ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ನಿಪಿ.14, 14(ಎ) (ಬಿ), 1, ನಿಪಿ.17,18, 21,22 ಮತ್ತು 23 ರಲ್ಲಿ ಖರೀದಿದಾರರ ಹೆಸರು ನಮೂದು ಇಲ್ಲ ಎಂದರೆ ಸರಿ. ನಿಪಿ.19 ಮತ್ತು ನಿಪಿ.20 ನ್ನು ದಿಃ 20.01.2020 ರಂದು ಖರೀದಿ ಮಾಡಿದ ರಶೀದಿಗಳು ಎಂದರೆ ಸಾಕ್ಷಿಯು ಮದುವೆಗೆ ಮುಂಚೆ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ನಿಪಿ.24 ಮದುವೆಯಾದ ನಂತರದಲ್ಲಿ ಖರೀದಿಸಿದ ರಶೀದಿ ಎಂದರೆ ಸರಿ. ನಾನು ನ್ಯಾಯಾಲಯಕ್ಕೆ ನನ್ನ ಯಾವುದೇ ವೈದ್ಯಕೀಯ ದಾಖಲೆಗಳನ್ನು ಹಾಜರುಪಡಿಸಿಲ್ಲ.

**ಮರುವಿಚಾರಣೆ ಇಲ್ಲಃ**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ, ಹರಿಹರ